## ಸಮಾಜ ಮುಕ್ತವಾಗುತ್ತಿದೆ...

ಮಕ್ಕಳಿಗೆ ಲೈಂಗಿಕ ಶಿಕ್ಷಣ ನೀಡುವ ಬಗೆಗೆ ಅಥವಾ ನಮ್ಮೆಲ್ಲರ ಲೈಂಗಿಕತೆಯ ಬಗೆಗೆ ಸಾರ್ವಜನಿಕವಾಗಿ ಚರ್ಚೆ, ವಿಚಾರ ವಿನಿಮಯ ಮಾಡಿಕೊಳ್ಳುವ ಬಗೆಗೆ ಯೋಚಿಸುವವರೆಲ್ಲಾ ಮುಕ್ತ ಲೈಂಗಿಕತೆಯ ಪ್ರತಿಪಾದಕರೆಂದು ಹೇಳಲಾಗುತ್ತದೆ. ಎಲ್ಲಾ ಚೌಕಟ್ಟುಗಳನ್ನು ಮೀರಿದ ಲೈಂಗಿಕ ಕ್ರಿಯೆಯ ಪರ ವಾದಿಸುವುದಕ್ಕೂ ಅಥವಾ ಕಾನೂನುಬದ್ಧ ಸ್ತ್ರೀಪುರುಷರ ಸಮಾಗಮದ ಬಗೆಗೆ ಆರೋಗ್ಯಪೂರ್ಣ ಮಾಹಿತಿ ನೀಡುತ್ತಾ ಅನಗತ್ಯ ಭಯ, ತಪ್ಪು ತಿಳಿವಳಿಕೆ, ಪಾಪಪ್ರಜ್ಞೆ ಮುಂತಾದವುಗಳನ್ನು ಮೀರಲು ಸಹಾಯ ಮಾಡುವುದಕ್ಕೂ ಇರುವ ವ್ಯತ್ಯಾಸಗಳನ್ನು ಇಂಥವರು ಕಡೆಗಣಿಸುತ್ತಾರೆ. ಹೀಗೆ ಮಾಡುವುದರ ಹಿಂದೆ ಅವರೆಲ್ಲರ ಮನಸ್ಸಿನಲ್ಲಿ ಇರುವ ಅನಗತ್ಯವಾದ ಆತಂಕ, ತಪ್ಪು ತಿಳಿವಳಿಕೆಗಳು ಕಾರಣ ಎನ್ನುವ ಆತ್ಮವಿಮರ್ಶೆ ಮಾಡಿಕೊಳ್ಳಲು ಅವರು ಸಿದ್ಧರಾಗಿರುವುದಿಲ್ಲ. ಹಾಗಾಗಿಯೇ ಇಂಥವರ ಗಂಟಲು ಮತ್ತು ದಬ್ಬಾಳಿಕೆಯ ನಡುವೆ ವಿವೇಕದ ಮಾತುಗಳು ಮುರುಟಿಕೊಳ್ಳುತ್ತಿವೆ.

ಸಮಾಜ ಮತ್ತು ಮಾಹಿತಿ ಮುಕ್ತವಾಗುತ್ತಿರುವುದನ್ನು ನಾವೆಲ್ಲಾ ಒಪ್ಪಿಕೊಂಡಿದ್ದೇವೆ. ಹಳ್ಳಿಯ ಮೂಲೆ ಮೂಲೆಗಳಲ್ಲಿ ಮೊಬೈಲ್ ಮತ್ತು ಅಂತರ್ಜಾಲ ಹರಿದಾಡುತ್ತಿದೆ. ಅಂತರ್ಜಾಲದಿಂದ ದೊರೆಯುವ ಎಲ್ಲಾ ಮಾಹಿತಿಯನ್ನು ನಿಯಂತ್ರಿಸುವುದು ಕಷ್ಟ. ತಪ್ಪಾದ ಮತ್ತು ಅಪಾಯಕಾರಿಯಾದ ಮಾಹಿತಿಗಳನ್ನು ಹರಡವುದನ್ನು ತಪ್ಪಿಸುವುದೂ ಅಸಾಧ್ಯ ಎಂದು ನಮ್ಮ ಸರ್ಕಾರಗಳಿಗೂ ತಿಳಿದಿದೆ. ಹಾಗಾಗಿ ಉಳಿದಿರುವ ಒಂದೇ ದಾರಿ ಜನಸಮುದಾಯಕ್ಕೆ ಇಲ್ಲಿ ಸಿಗುವ ಮಾಹಿತಿಗಳ ವಿಶ್ವಾಸಾರ್ಹತೆಯ ಬಗೆಗೆ ಎಚ್ಚರ ವಹಿಸುವ ಶಿಕ್ಷಣ ನೀಡುವುದು.

ಲೈಂಗಿಕ ವಿಚಾರಗಳ ಬಗೆಗೆ ಇದೇ ಸರಳ ನೀತಿಯನ್ನು ಅನುಸರಿಸಲು ಮಾತ್ರ ನಾವು ಹಿಂಜರಿಯುತ್ತಿದ್ದೇವೆ. ಎಲ್ಲರ ಕೈಗೆ ಮೊಬೈಲ್ ಮತ್ತು ಅಂತರ್ಜಾಲವೆಂಬ ಎರಡು ಅಲಗಿನ ಕತ್ತಿಯನ್ನು ನೀಡಿದ್ದೇವೆಯೇ ಹೊರತು ಅದನ್ನು ಉಪಯೋಗಿಸುವ ಬಗೆಗೆ ತರಬೇತಿ ನೀಡುವ ವ್ಯವಸ್ಥೆ ಇಲ್ಲ. ಇಂತಹ ಹರಿತವಾದ ಕತ್ತಿಯಿಂದ ಮಕ್ಕಳಷ್ಟೇ ಅಲ್ಲ, ದೊಡ್ಡವರೂ ಗಾಯ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಕಾರಣಗಳನ್ನು ನಾವು ಆಧುನಿಕತೆಯಲ್ಲಿ, ಪಾಶ್ಚಾತ್ಯ ಸಂಸ್ಕೃತಿಯ ಪಾಲನೆಯಲ್ಲಿ, ನಮ್ಮ ಮೌಲ್ಯಗಳನ್ನು ಕಡೆಗಣಿಸಿದ್ದರಲ್ಲಿ ಗುರುತಿಸುತ್ತಿದ್ದೇವೆ. ಲೈಂಗಿಕತೆಯ ಬಗೆಗಿನ ಎಲ್ಲಾ ಅಂಶಗಳನ್ನು ಮುಸುಕಿನೊಳಗೆ ಇಟ್ಟು ಬದುಕುತ್ತಿದ್ದ ಇಲ್ಲಿಯವರೆಗಿನ ಕಾಲದಲ್ಲಿ ಎಲ್ಲವೂ ಸರಿಯಾಗಿ ಇರುತ್ತಿರಲಿಲ್ಲ ಎನ್ನುವುದು ಈಗ ತಿಳಿಯುತ್ತಿದೆ. ಹಾಗಿದ್ದರೂ ಕಣ್ಣಿಗೆ ಕಾಣುವ ಸತ್ಯಗಳನ್ನು ಒಪ್ಪಿಕೊಳ್ಳುವ ಧೈರ್ಯ ಮತ್ತು ಪರಿಹಾರವನ್ನು ಹುಡುಕುವ ಸ್ಪಷ್ಟತೆ ಯಾರಲ್ಲಿಯೂ ಕಂಡುಬರುತ್ತಿಲ್ಲ.

## ಎಲ್ಲರ ಸಹಜ ಹುಡುಕಾಟ

ಲೈಂಗಿಕತೆಯ ಬಗೆಗಿನ ಹುಡುಕಾಟ ಮಾನವನ ಸಹಜ ಪ್ರವೃತ್ತಿ ಎಂದು ಮನಃಶಾಸ್ತ್ರ ಸಿದ್ಧಪಡಿಸಿದೆ. ಅಂತಹ ಹುಡುಕಾಟದ ಮೂಲಕವೇ ನಾವೆಲ್ಲಾ ಲೈಂಗಿಕತೆಯ ಬಗೆಗೆ ನಮ್ಮ ಕಲ್ಪನೆ, ಕನಸುಗಳನ್ನು ಕಟ್ಟಿಕೊಳ್ಳುತ್ತೇವೆ. ಹಾಗಾಗಿ ಇವತ್ತಿನ ಜನ ಮಾತ್ರ ಲೈಂಗಿಕತೆಯ ಬಗೆಗೆ ಹೆಚ್ಚು ಆಸಕ್ತಿ ತೋರಿಸುತ್ತಿದ್ದಾರೆ ಅಥವಾ ಅಂತರ್ಜಾಲದಲ್ಲಿ ರೋಚಕ ಮಾಹಿತಿ ಅಥವಾ ದೃಶ್ಯಾವಳಿಗಳ ಬಗೆಗೆ ಹೆಚ್ಚಾಗಿ ಆಕರ್ಷಿತರಾಗುತ್ತಿದ್ದಾರೆ ಎನ್ನುವುದು ತಪ್ಪು ತಿಳಿವಳಿಕೆ. ನೂರಾರು ವರ್ಷಗಳ ಹಿಂದೆ ಇತರರ ಸಮಾಗಮವನ್ನು ಕದ್ದು ನೋಡುವುದರಿಂದ, ಪ್ರಾಣಿಗಳ ಲೈಂಗಿಕಕ್ರಿಯೆಯನ್ನು ಗಮನಿಸುವುದರಿಂದ ಅಥವಾ ಗಾಸಿಪ್ ಚರ್ಚೆಗಳಿಂದ ಜನರ ಲೈಂಗಿಕ ಕುತೂಹಲ ತಣಿಯುತ್ತಿತ್ತೇನೋ!

50 ವರ್ಷಗಳ ಹಿಂದೆ ಹದಿವಯಸ್ಸಿನವರು ಸಂತೆ ಅಥವಾ ರಸ್ತೆ ಮೂಲೆಯ ಗೂಡಂಗಂಡಿಯಲ್ಲಿ ಸಿಗುತ್ತಿದ್ದ ಚಿಕ್ಕಚಿಕ್ಕ ಪುಸ್ತಕಗಳನ್ನು ಬನಿಯನ್‌ನೊಳಗಡೆ ಬಚ್ಚಿಟ್ಟು ಗುಪ್ತಸ್ಥಳಗಳಿಗೆ ಸಾಗಿಸಿ ಸವಿಯುತ್ತಿದ್ದರು! ಗುಪ್ತಸಮಾಲೋಚನೆ ಮಾಡುತ್ತಾ ಕರ್ನಾಟಕದ 'ವಾರಪತ್ರಿಕೆ'ಯೊಂದು ಸಾಕಷ್ಟು ವರ್ಷ ಜೀವ ಉಳಿಸಿಕೊಂಡಿತ್ತು! ಇವತ್ತು ಅಂತರ್ಜಾಲದಲ್ಲಿ ಎಲ್ಲವೂ ಮುಕ್ತವಾಗಿ ದೊರೆಯುತ್ತಿದೆ. ಅಂದರೆ ತಾಂತ್ರಿಕತೆ ಬದಲಾದಂತೆ ಮಾಧ್ಯಮಗಳು ಬದಲಾಗಿವೆಯೇ ಹೊರತು ಮೂಲ ಪ್ರವೃತ್ತಿ ಮಾತ್ರ ಒಂದೇ ಆಗಿದೆ.

